at the last session of the Assembly to which Government answered that the answer would be furnished after receiving the opinion of the Committee formed by the Central Government ?

Sri T. CHANNIAH (Minister for Public Health and Local Self-Government).—It is not possible to fix any date on which Prohibition could be extended to the remaining Districts of the State.

ಶ್ರೀ ಎಚ್. ಟಿ. ಪುಟ್ಟಪ್ಪ.—ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕೆ ಇದೆಯೋ ಇಲ್ಲವೊ ?

ಶ್ರೀ ಟಿ. ಚನ್ನಯ್ಯ —ಇದೆ. ಆದರೆ ಎರಡು ಕಾರಣಗಳಿಂದ ಅದನ್ನು ತಕ್ಷಣ ವಿಸ್ತಾರಗೊಳಿಸುವುದು ಸಾಧ್ಯವಿಲ್ಲವೆಂದು ನಾನು ಆಗಲೇ ತಿಳಿಸಿದ್ದೇನೆ. ಪಾನನಿರೋಧ ಯಶಸ್ವಿಯಾಗಬೇಕಾದರೆ ಮುಖ್ಯವಾಗಿ ನೈತಿಕ ವಾತಾವರಣ ಬೆಳೆಯಬೇಕಾದುದು ಅತ್ಯಾವಶ್ಯಕ, ಸಾರ್ವಜನಿಕರೂ ಸಹಕಾರ ನೀಡಬೇಕಾದುದು ಅತ್ಯಗತ್ಯ ಅವರಿಂದ ಪಾನನಿರೋಧದ ಬಗ್ಗೆ ಒತ್ತಾಯ ಬೇಕು. ಎರಡನೆಯದು, ಸರ್ಕಾರದ ಸದ್ಯದ ಹಣಕಾಸಿನ ಕಷ್ಟಪರಿಸ್ಥಿತಿಯಲ್ಲಿ ಪೂರ್ಣ ಪಾನನಿರೋಧವನ್ನು ಜಾರಿಗೆ ತರಲು ಸಾಧ್ಯವಿಲ್ಲವಾಗಿದೆ.

———

Vacancies of First Division Clerks in the Medical Department.

Q.—684. Sri G. PUTTASWAMY (Chikmagalur-Mudigere— Scheduled Castes).—

Will the Government be pleased to state :—

(*a*) whether they have issued orders requiring I Division clerical vacancies occurring in the Medical Department to be filled up only by candidates appointed by the Public Service Commission ;

(*b*) whether they will think of reserving a few of the 1st Division vacancies that may occur in the Department for being filled up by the concerned unit officers themselves by promoting thereto officials who are working in the department and who have put in sufficient service ?

A.—Sri T. CHANNIAH (Minister for Public Health and Local Self-Government).—

(*a*) No.

(*b*) The rules in force are being followed in regard to the classification of vacancies into promotional and direct recruitment vacancies.

ಶ್ರೀ ಜಿ. ಪುಟ್ಟಸ್ವಾಮಿ.—ಈ ಇಲಾಖೆಯಲ್ಲಿರತಕ್ಕ ಮೊದಲನೆಯ ದರ್ಜೆ ಗುಮಾಸ್ತೆ ಕೆಲಸಗಳನ್ನು ಪದವೀಧರರಿಗೆ ಮಾತ್ರ ಕೊಡಬೇಕೆಂದು ಆಜ್ಞೆಮಾಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಆಜ್ಞೆ ಮಾಡಿಲ್ಲವೆಂದು ಉತ್ತರದಲ್ಲಿಯೇ ತಿಳಿಸಿದೆ.

ಶ್ರೀ ಜಿ. ಪುಟ್ಟಸ್ವಾಮಿ —ಪದವೀಧರರಿಗೆ ಎಂದು ಉತ್ತರದಲ್ಲಿ ಕೊಟ್ಟಿಲ್ಲ. ಅವರಿಗೆ ಮಾತ್ರ ಮೊದಲನೆಯ ದರ್ಜೆ ಕೆಲಸಗಳಿಗೆ ಪ್ರಮೋಷ್ಷ ಕೊಡಬೇಕೆಂದು ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಇದನ್ನೆಲ್ಲಾ ಪಬ್ಲಿಕ್ ಸರ್ವಿಸ್ ಕಮಿಷ್ಷ ರೂಲ್ಸ್ ಅನುಸರಿಸಿ ಮಾಡಲಾಗುತ್ತಿದೆ. ಸಾಮಾನ್ಯವಾಗಿ ಸ್ಥಾನಗಳು ಖಾಲಿ ಬಿದ್ದರೆ, ಅವುಗಳಲ್ಲಿ ಕೆಲವಕ್ಕೆ ನೇರವಾಗಿ ರಿಕ್ರೂಟ್ ಮಾಡಲಾಗುತ್ತಿದೆ ಮತ್ತು ಕೆಲವನ್ನು ಕೆಳದರ್ಜೆಯಿಂದ ಪ್ರಮೋಷ್ಷ ಮಾಡುವುದರ ಮೂಲಕ ಭರ್ತಿ ಮಾಡಲಾಗುತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಎ ಮತ್ತು ಬಿ ಕ್ಲಾಸ್? ಸ್ಥಾನಗಳಲ್ಲಿ ಪ್ರಮೋಷ್ಷ ವೇಕೆನ್ಸಿಗಳಿವೆಯೋ ಇಲ್ಲವೊ?

ಶ್ರೀ ಟಿ. ಚನ್ನಯ್ಯ.—ಇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಬಿ. ವೇಕೆನ್ಸಿಗಳನ್ನು ಪದವೀಧರರಿಗಲ್ಲದೆ ನಿಮ್ಮ ವರ್ಗದವರಿಗೆ ಫಸ್ಟ್ ಪ್ರಿಫರೆನ್ಸ್ ಕೊಡಬೇಕೆಂಬುದನ್ನು ಪರಿಶೀಲಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಎರಡನೆಯ ದರ್ಜೆಯಲ್ಲಿರುವ ಪದವೀಧರರಲ್ಲದವರಿಗೆ ಮೊದಲನೆಯ ದರ್ಜೆ ಕೆಲಸವನ್ನು ದೊರಕಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಇದೆಲ್ಲವನ್ನೂ ಪಬ್ಲಿಕ್ ಸರ್ವಿಸ್ ಕಮಿಷ್ಷ ರೂಲ್ಸ್ ಅನುಸರಿಸಿ ಮಾಡುತ್ತೇವೆ.

———

Appointment of Textile Graduates in Civil Departments.

Q.—211. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether it has come to their notice that one of the candidates selected for the post of Assistant Sales Tax Officer in 1951 is a Textile Graduate :

(*b*) whether Textile Degree is recognized by them and the Public Service Commission for appointments in all Civil Departments ;

(*c*) if not the circumstances that led for the appointment of the above candidate ?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) Yes.

(*c*) Does not arise in view of answer to (b).